# ‘ಅನ್ನಿಯನ್’ ಹಿಂದಿ ರೀಮೇಕ್‌ಗೆ ಎಡರು



■ ವಿಶಾಖ ಎನ್.

ರೀಮೇಕ್‌ಗಳನ್ನು ಬಿಟ್ಟು ತಮಿಳು, ಮಲೆಯಾಳಂ ಭಾಷೆಗಳಲ್ಲಿ ದೊಡ್ಡ ಜಗಿತ ಎನ್ನುವಂಥ ಸಿನಿಮಾಗಳು ಬರುತ್ತಿವೆ. ಇನ್ನೊಂದು ಕಡೆ ಹಿಂದಿ ಚಿತ್ರರಂಗದವರು ಫ್ರಿಡ್ಜ್‌ನಲ್ಲಿ ಇಟ್ಟ ತಂಗಳನ್ನವೇ ಇರಲಿ ಎನ್ನುವಂತೆ ಹಳೆಯ ಸರಕನ್ನು ಕಂಡು ನಾಲಗೆ ಹೊರಚಾಚುತ್ತಿದ್ದಾರೆ. 2005ರಲ್ಲಿ ತೆರೆಕಂಡು, ಹೂಡಿದ್ದ ಬಂಡವಾಳದ ದುಪ್ಪಟ್ಟು ಹಣ ಮಾಡಿದ್ದ ತಮಿಳು ಚಿತ್ರ ‘ಅನ್ನಿಯನ್’ ಮೇಲೆ ರಣವೀರ್ ಸಿಂಗ್ ಕಣ್ಣು ಬಿದ್ದಿದೆ. ಹಿಂದೆ ತೆಲುಗಿನ ‘ಟೆಂಪರ್’ ಅನ್ನು ‘ಸಿಂಬಾ’ ಆಗಿಸಿ, ಗೆದ್ದ ನಟ ಅವರು. ಈಗ ‘ಅನ್ನಿಯನ್’ಗೆ ಮರುಜೀವ ತುಂಬಲು ಅಣಿಯಾಗಿದ್ದಾರೆ. ಶಂಕರ್ ತಾವೇ ಅದನ್ನು ಹಿಂದಿಯಲ್ಲಿ ನಿರ್ದೇಶಿಸುವುದಾಗಿಯೂ ಪ್ರಕಟಿಸಿದ್ದಾರೆ.

ಪೆನ್ ಸ್ಟುಡಿಯೋಸ್‌ನ ಜಯಂತಿ ಲಾಲ್ ಗಡಾ ಈ ‘ಪ್ಯಾನ್ ಇಂಡಿಯಾ’ ಸಿನಿಮಾ ಮೇಲೆ ಬಂಡವಾಳ ಹೂಡಲು ಮುಂದೆ ಬಂದಿದ್ದಾರೆ. ಮುಂದಿನ ವರ್ಷದ ನಡುಘಟ್ಟದಲ್ಲಿ ಚಿತ್ರೀಕರಣ ಪ್ರಾರಂಭಿಸಬೇಕು ಎನ್ನುವುದು ತಂಡದ ಉದ್ದೇಶ. ಆದರೆ, ಮೂಲ ಚಿತ್ರದ ನಿರ್ಮಾಪಕ ಆಸ್ಕರ್ ವಿ. ರವಿಚಂದ್ರನ್, ಸಿನಿಮಾದ ಚಿತ್ರಕಥಾ ಹಕ್ಕುಸ್ವಾಮ್ಯ ತಮ್ಮ ಬಳಿ ಇರುವುದರಿಂದ ಅದನ್ನೇ ರೀಮೇಕ್ ಮಾಡಲು ಹೊರಡುವುದು ಅಕ್ರಮವಾಗುತ್ತದೆ ಎಂದು ಎಚ್ಚರಿಕೆಯ ಗಂಟೆ ಬಾರಿಸಿದ್ದಾರೆ. ಇನ್ನೊಂದು ಕಡೆ ‘ಇಂಡಿಯನ್ 2’ ಸಿನಿಮಾ ನಿರ್ಮಿಸುತ್ತಿರುವ ಲೈಕಾ ಫಿಲ್ಮ್ಸ್ ನಿರ್ಮಾಣ ಕಂಪನಿಯವರು ತಮ್ಮ ಚಿತ್ರವನ್ನು ಪೂರ್ಣಗೊಳಿಸದೇ ಇನ್ನೊಂದು ಪ್ರಾಜೆಕ್ಟ್‌ಗೆ ಕೈಹಾಕುವುದರಿಂದ ಶಂಕರ್ ಅವರನ್ನು ತಡೆಯಬೇಕು ಎಂದು ಹೈಕೋರ್ಟ್ ಮೆಟ್ಟಿಲೇರಿದೆ.

ಸುಜಾತಾ ಎಂಬ ಅಡ್ಡ ಹೆಸರಿನಿಂದ ಚಿತ್ರಸಾಹಿತಿಯಾಗಿ ಗುರುತಾಗಿದ್ದ ಎಸ್. ರಂಗರಾಜನ್ ಅವರ ಚಿತ್ರಕಥೆ ‘ಅನ್ನಿಯನ್’ ಸಿನಿಮಾದಲ್ಲಿದೆ. ಅದಕ್ಕೆ ಸಂಭಾಷಣೆಯನ್ನೂ ಅವರೇ ಬರೆದಿದ್ದರು. ಅವರಿಗೆ ಹಕ್ಕುಸ್ವಾಮ್ಯಕ್ಕಾಗಿ ಎಷ್ಟು ಸಂಭಾವನೆ ನೀಡಬೇಕೋ ಅಷ್ಟನ್ನು ಕೊಟ್ಟು ತಾವು ಖರೀದಿಸಿದ್ದಾಗಿ ನಿರ್ಮಾಪಕ ವಿ. ರವಿಚಂದ್ರನ್ ಈಗ ಹೇಳಿರುವುದರಿಂದ ಹಿಂದಿ ಚಿತ್ರದ ಕಥೆ ಏನಾಗುತ್ತದೋ ನೋಡಬೇಕು. ■

# ಕೋವಿಡ್ ಅಲೆಯ ಭಯದಲ್ಲಿ ತಲೈವಿ

ಕಂಗನಾ ರನೋಟ್ ಅಭಿನಯದ ಬಹು ನಿರೀಕ್ಷಿತ ಬಹುಭಾಷಾ ಚಿತ್ರ ‘ತಲೈವಿ’ ಎಲ್ಲಾ ಅಂದುಕೊಂಡಂತೆ ಇದ್ದಿದ್ದರೆ ಏಪ್ರಿಲ್ 23ಕ್ಕೆ ತೆರೆಕಾಣಬೇಕಿತ್ತು. ಆದರೆ, ಕೋವಿಡ್ ಎರಡನೇ ಅಲೆಯ ಉಬ್ಬರ ಕಂಡು ಚಿತ್ರತಂಡ ಬಿಡುಗಡೆ ದಿನಾಂಕವನ್ನು ಮುಂದೂಡಿದೆ. ಹಿಂದಿ, ತಮಿಳು, ತೆಲುಗಿನಲ್ಲಿ ಈ ಚಿತ್ರ ಏಕಕಾಲದಲ್ಲಿ ತೆರೆಕಾಣಲಿದೆ.

ತಮಿಳುನಾಡಿನ ಮುಖ್ಯಮಂತ್ರಿಯಾಗಿ ಸದ್ದು ಮಾಡಿದ್ದ ಜಯಲಲಿತಾ ಅವರ ಬದುಕಿನ ಪುಟಗಳನ್ನು ಒಳಗೊಂಡ ಚಿತ್ರಕಥೆಯ ಸಿನಿಮಾ ಇದು. ವಿಮರ್ಶಕರ ಮೆಚ್ಚುಗೆ ಗಳಿಸಿದ ‘ಮದರಾಸಿಪಟ್ಟಣಂ’ ಚಿತ್ರ ನಿರ್ದೇಶಿಸಿದ್ದ ಎ.ಎಲ್. ವಿಜಯ್ ಇದರ ನಿರ್ದೇಶಕರು. ನವೆಂಬರ್ 2019ರಲ್ಲೇ ಚಿತ್ರೀಕರಣ ಪ್ರಾರಂಭವಾಗಿತ್ತಾದರೂ ಕೋವಿಡ್‌ನ ಎಡರುಗಳನ್ನು ದಾಟಿಕೊಂಡು ಚಿತ್ರ ತಯಾರು ಮಾಡಲು ಹೆಚ್ಚೇ ಸಮಯ ಬೇಕಾಯಿತು. ಎಂ.ಜಿ. ರಾಮಚಂದ್ರನ್ ಪಾತ್ರದಲ್ಲಿ ಅರವಿಂದ ಸ್ವಾಮಿ ಅಭಿನಯಿಸಿದ್ದು, ಅವರ ಹಾಗೂ ಕಂಗನಾ ಕಾಂಬಿನೇಷನ್ ಹೇಗೆ ಕಾಣಲಿದೆ ಎಂಬ ಕುತೂಹಲ ಚಿತ್ರಾಭಿಮಾನಿಗಳಲ್ಲಿ ಇದೆ.

‘ಪುರುಷಪ್ರಧಾನ ಸಮಾಜದಲ್ಲಿ ತಮ್ಮ ಸೌಂದರ್ಯವಷ್ಟೇ ಅಲ್ಲದೆ ಬುದ್ಧಿಮತ್ತೆಯನ್ನೂ ಇಟ್ಟುಕೊಂಡು ದೊಡ್ಡ ಎತ್ತರಕ್ಕೆ ಜಯಲಲಿತಾ ಬೆಳೆದರು. ಅವರು ಅನೇಕರಿಗೆ ಸ್ಫೂರ್ತಿ. ಅಂಥವರ ಬದುಕಿನ ಆಸಕ್ತಿಕರ ಪುಟಗಳನ್ನು ತೆರೆಗೆ ತರುವುದು ಸವಾಲೂ ಹೌದು, ಖುಷಿಯೂ ಹೌದು’ ಎಂದು ನಿರ್ದೇಶಕ ವಿಜಯ್ ಹೇಳಿಕೊಂಡಿದ್ದರು. ಕಂಗನಾ ಕೂಡ ಈ ಚಿತ್ರಕ್ಕೆ ರಸಿಕರಿಂದ ಹೇಗೆ ಸ್ಪಂದನ ಸಿಗಲಿದೆ ಎಂದು ಕಾತರರಾಗಿದ್ದಾರೆ. ಚಿತ್ರದ ಪ್ರೋಮೊವನ್ನು ಎರಡು ಕೋಟಿ ಜನ ಅಲ್ಪಾವಧಿಯಲ್ಲೇ ವೀಕ್ಷಿಸಿದ್ದಾರೆ. ■

